ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 122/2024**

ಪ್ರ.ವ.ಬೋ.ತಾಃ 29-04-2026

ಚಾಸಾಃ 3 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಮದನ್ ಮೋಹನ್ ರೆಡ್ಡಿ |
| ತಂದೆ/ಗಂಡನ ಹೆಸರು | ತಿಮ್ಮಯ್ಯ |
| ವಯಸ್ಸು | 34 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಎಸ್. ಅಪ್ಪೇನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿ ಗೊತ್ತು. ಚಾ.ಸಾ.1 ಮತ್ತು 2 ರವರು ಗೊತ್ತು. ದಿನಾಂಕಃ 03-11-2024 ರಂದು ಬೆಳಗ್ಗೆ 9 ಗಂಟೆ ಸಮಯದಲ್ಲಿ ಬೆಡತ್ತೂರ್ ಗೇಟ್ ರಾಮಚಂದ್ರಪ್ಪನವರ ಡಾಬಾದ ಹತ್ತಿರ ಬೆಳಗಿನ ತಿಂಡಿ ತರಲು ಹೋಗಿದ್ದ ಸಮಯದಲ್ಲಿ ಮಡಕಶಿರಾ ಕಡೆಯಿಂದ ಕೆಎ-03-ಜೆಟಿ-4102 ಟಿ.ವಿ.ಎಸ್. ವಿಕ್ಟರ್ ವಾಹನದಲ್ಲಿ ತಿಮ್ಮರೆಡ್ಡಿ ಮತ್ತು ಗೋಪಾಲ್ ರವರು ತಲೆಗೆ ಹೆಲ್ಮೆಟ್ ಹಾಕಿಕೊಂಡು ರಸ್ತೆಯ ಎಡಭಾಗದ ಮಣ್ಣು ರಸ್ತೆಯಲ್ಲಿ ಬರುತ್ತಿರುವಾಗ ಮಧುಗಿರಿ ಕಡೆಯಿಂದ ಕೆಎ-07-ಬಿ-1583 ದೋಸ್ತ್ ಆರ್.ಎಲ್.ಎಸ್. ಬಿ.ಎಸ್.IV ರ ವಾಹನ ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ತಿಮ್ಮರೆಡ್ಡಿ ಮತ್ತು ಗೋಪಾಲ್ ರವರು ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದರು . ಇದರಿಂದ ತಿಮ್ಮರೆಡ್ಡಿಯವರ ಬಲಗಾಲು ಮುರಿದು ಹೋಗಿ ಸ್ಥಳದಿಂದ ಸುಮಾರು 15 ಅಡಿ

ದೂರದಲ್ಲಿ ಬಿದ್ದಿತ್ತು. ಆತನ ತಲೆಯ ಬುರುಡೆ ತೆರೆಯಲ್ಪಟ್ಟು ಮೆದುಳು ಸಹ 5 ಅಡಿ ದೂರದಲ್ಲಿ ಬಿದ್ದಿತ್ತು. ತಿಮ್ಮರೆಡ್ಡಿ ಸ್ಥಳದಲ್ಲಿಯೇ ಮೃತ ಪಟ್ಟರು. ಇದರಿಂದ ಗೋಪಾಲರವರಿಗೆ ಮೈಕೈಗೆ, ತಲೆಗೆ ಮತ್ತು ಕೈ ಕಾಲುಗಳಿಗೆ ಗಾಯಗಳಾಗಿದ್ದವು. ತಕ್ಷಣ ಆತನನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಆಂಬ್ಯೂಲೆನ್ಸ್ ಮೂಲಕ ತೆಗೆದುಕೊಂಡು ಹೋದೆವು. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆತನಿಗೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತ ಪಟ್ಟರು. ಆ ಸಮಯದಲ್ಲಿ ಆರೋಪಿ ಆ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಅಲ್ಲಿಂದ ಓಡಿ ಹೋದರು.

ದಿನಾಂಕಃ 12-11-2024 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದು ಆರೋಪಿಯನ್ನು ತೋರಿಸಿದರು. ಆತನ ಹೆಸರು ಮತ್ತು ವಿಳಾಸವನ್ನು ಸಹ ನನಗೆ ತಿಳಿಸಿದರು. ಆ ದಿನ ಅಪಘಾತ ಪಡಿಸಿದ ವ್ಯಕ್ತಿ ನ್ಯಾಯಾಲಯದ ಮುಂದಿರುವ ಆರೋಪಿ ಆಗಿರುತ್ತಾರೆ. ಆ ದಿನ ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ-07-ಬಿ1583 ಮತ್ತು ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನಸಂಖ್ಯೆ ಕೆಎ-03-ಜೆಟಿ-4102 ಕ್ಕೆ ಸಂಬಂಧಪಟ್ಟ ಪೊಟೋವನ್ನು ನೋಡಿದರೆ ಗುರುತಿಸುತ್ತೇನೆ. ಆ ಪೊಟೋವನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದೆ. ಆ ದಿನ ಮೃತ ತಿಮ್ಮರೆಡ್ಡಿ ಮತ್ತು ಗೋಪಾಲ್ ರವರು ತಲೆಗೆ ಧರಿಸಿದ್ದ ಹೆಲ್ಮೆಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನು ಮು.ಮಾ.1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಘಟನೆಯ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u>– ಆರೋಪಿ ಪರವಾಗಿ ಶ್ರೀ.ಆರ್.ಆರ್. ವಕೀಲರಿಂದಃ–**

ನಮ್ಮ ಊರು ಘಟನಾ ಸ್ಥಳದಿಂದ 3 ಕಿ.ಮೀ. ದೂರದಲ್ಲಿದೆ. ಆ ದಿನ ನಾನು ಬೆಳಗ್ಗೆ 8 ಗಂಟೆಗೆ ಆ ಸ್ಥಳದಲ್ಲಿದ್ದೆನು. ಚಾ.ಸಾ.2 ರವರ ಬೈಕ್ ನಂಬರ್ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಆ ಹೊಟೇಲ್ ನ ಹೊರಭಾಗದಲ್ಲಿದ್ದೆನು. ರಾಮಚಂದ್ರಪ್ಪರವರ ಹೊಟೇಲ್ ನಿಂದ 5 ರಿಂದ 10 ಅಡಿ ದೂರದಲ್ಲಿ ಅಪಘಾತವಾಗಿತ್ತು. ಆ ದಿನ ಆ ವಾಹನ ಅತಿವೇಗವಾಗಿ ಬರುತ್ತಿತ್ತು ಆದರೆ ಎಷ್ಟು ಕಿ.ಮೀ. ವೇಗದಲ್ಲಿ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಮಧುಗಿರಿ ಮತ್ತು ಮಡಕಶಿರಾ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. ಆ ರಸ್ತೆಯಲ್ಲಿ ಬೆಳಗ್ಗೆ 9 ಗಂಟೆಯಿಂದ ಸಾಕಷ್ಟು ವಾಹನಗಳು ಬರುವುದು ಹೋಗುವುದು ಮಾಡುತ್ತವೆ ಎಂದರೆ ಸರಿ. ಈ ಅಪಘಾತವಾದ 15 ನಿಮಿಷಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದರು. ಮಿಡಿಗೇಶಿ ಪೊಲೀಸ್ ಠಾಣೆಯಿಂದ 5 ಕಿ.ಮೀ. ದೂರದಲ್ಲಿ ಅಪಘಾತವಾದ ಸ್ಥಳ ಇದೆ. ಘಟನಾ ಸ್ಥಳಕ್ಕೆ ಮೊದಲು ಮಿಡಿಗೇಶಿ ಪೊಲೀಸ್ ಠಾಣೆ ಸಿಬ್ಬಂದಿ ಬಂದರು ಆ ನಂತರ ಪಿ.ಎಸ್.ಐ. ಬಂದರು. ಈ ಅಪಘಾತದ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ನಾನು ಸಹ ಆಂಬೂಲೆನ್ಸ್ ಮೂಲಕ ಗಾಯಾಳುವಿನ ಜೊತೆ ಆಸ್ಪತ್ರೆಗೆ ಬಂದೆನು. ಪೊಲೀಸರು ಬೇರೆ ವಾಹನದ ಮೂಲಕ ಆಸ್ಪತ್ರೆಗೆ ಬಂದರು. ಆಂಬ್ಯೂಲೆನ್ಸ್ ಬರುತ್ತಿದ್ದ ರಸ್ತೆಯ ಎಡಭಾಗದಲ್ಲಿಯೇ ಮಿಡಿಗೇಶಿ ಪೊಲೀಸ್ ಠಾಣೆ ಇದೆ. ಆ ನಂತರ ಗೋಪಾಲ್ ರವರನ್ನು ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋದರು ಅಲ್ಲಿಗೆ ನಾನು ಹೋಗಿಲ್ಲ.

ಅಪಘಾತವಾದ ನಂತರ ಅಪಘಾತ ಪಡಿಸಿದ ವಾಹನ 50 ಮೀಟರ್ ದೂರಕ್ಕೆ ಹೋಗಿ ನಿಂತಿತ್ತು. ಪೊಲೀಸರು ಸ್ಥಳಕ್ಕೆ ಬಂದು ಅಪಘಾತ ಪಡಿಸಿದ ವಾಹನವನ್ನು ರಸ್ತೆಯ ಪಕಕ್ಕೆ ನಿಲ್ಲಿಸಿ ಆ ನಂತರ ವಶಕ್ಕೆ ಪಡೆದುಕೊಂಡರು. ಆ ಸಮಯದಲ್ಲಿ ನಿಪಿ.7 ಪೊಟೋವನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಆ ಹೆಲ್ಮೆಟ್ ಗಳನ್ನು ಸಹ ಪೊಲೀಸರು ತಕ್ಷಣ ತೆಗೆದುಕೊಂಡು ಹೋದರು. ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನವನ್ನು ಸಹ ಪೊಲೀಸರು ತಕ್ಷಣ ತೆಗೆದುಕೊಂಡು ಹೋದರು. ಆ ದಿನ ಯಾವ ಬಟ್ಟೆ ಧರಿಸಿದ್ದನು ಎಂದು ನನಗೆ ನೆನಪಿಲ್ಲ. ಆ ದಿನ ಆರೋಪಿ ಆ ವಾಹನವನ್ನು ಅತಿವೇಗವಾಗಿ ಓಡಿಸುತ್ತಿರಲಿಲ್ಲ ಮತ್ತು ಆರೋಪಿ ತಪ್ಪಿನಿಂದ ಈ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ಆ ವಾಹನವನ್ನು ಓಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ತಿಮ್ಮರೆಡ್ಡಿ ಮತ್ತು ಗೋಪಾಲ್ ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಅವರ ಕುಟುಂಬದವರು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದು ಅವರ ಕೋರಿಕೆಯ ಮೇರೆಗೆ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ